## THE MANY SIDES OF THE PROJECT

The Regional Empowered Committee has listed out the positive and negative impact of the project

### PROS

It will save fuel, reduce greenhouse gases as compared to road traffic

Economical means of transportation

Vital link for connecting eastern and western coasts

Will help develop northern Karnataka

Will help move equipment and work force for projects like Kaiga nuclear power plant

### CONS

Project will displace people

2,02,450 trees to be axed

Will impact wildlife in Bedthi, Kali Tiger and Hornbill conservation reserves

Will overlap with buffer area of Kali reserve and elephant corridors

Diversion of 595.64 hectares of forest land

Death knell for dense forests of Yellapur, Karwar

Risks of landslides, mudslides, earthquakes, smuggling of timber and forest goods

### Conditions for project to be cleared

No. of tunnels should be increased (from 25 to 34)

Build viaducts

More underpasses

Produce data on felled trees





Project will cause permanent damage to rainforests of Uttara Kannada; small reptiles, big mammals and guar will lose their habitat, says wildlife activist | G VEERESH

# Green nod for Hubballi-Ankola rail line

## Environmentalists say with move to fell 2 lakh trees, project will spell doom for prime forests and wildlife habitats, increase human-animal conflict

**MEERA BHARDWAJ** @ Bengaluru

The most ambitious rail project of Karnataka — the Hubballi-Ankola rail line — got green clearance on Monday, albeit with certain conditions stipulated by the Regional Empowered Committee (REC) of the Union Ministry of Environment and Forests.

Upon fulfillment of these conditions, the REC will issue stage-1 clearance for the project.

As the rail project passes through Bedthi Conservation Reserve and Hornbill Conservation Reserve and overlaps the buffer zone of Kali Tiger Reserve and elephant corridors, the user agency should submit appropriate proposals for consideration by the standing committee of the National Board of Wildlife, the committee added.

With respect to the felling of over 2 lakh trees for this project, the REC has asked the Forest De-

**Loss of forest cover**

| Division | Extent (in hectare area) |
|---|---|
| Dharwad | 42 |
| Yellapura | 304.06 |
| Karwar | 249.58 |
| Total | 595.64 |

**Trees to be axed**

| | |
|---|---|
| Dharwad | 11,795 |
| Yellapur | 1,19,439 |
| Karwar | 71,266 |
| Total | 2,02,450 |

partment to submit complete information species-wise and girth class-wise. Further, the compensatory afforestation scheme in lieu of this should be prepared, keeping in mind the revenue land

Kudremukh Project (as the state government was in the process of acquiring these lands at the earliest) or any other degraded forest land.

### Greens see red

Environmentalists say that the implementation of this project, pending for three decades, is bound to destroy prime forests of Western Ghats, premier wildlife habitat and elephant corridors. Further, death knell will sound for at least 2 lakh trees.

Nearly 596 hectares across Karwar, Yellapur and Dharwad divisions will be diverted for the construction of the new broad gauge rail line from the hinterland (Hubballi) to the Western coastal region (Ankola) in Uttara Kannada district.

Ullas Karanth, tiger biologist and Director for Scien...

said, "We are fortunate to have a unique biodiversity in the form of Western Ghats, which should not be disturbed. Many unplanned infrastructure and rail and road routes already criss-cross biodiversity regions, be it Bandipur or Nagarhole, which have had adverse impact. We should have a 100-year plan for smart, infrastructure corridors. Now, it is too late to protest. This should have been done before the takeoff of this rail project from the hinterland to the west coast."

G Veeresh, wildlife activist, said, "It will cause permanent damage to the rainforests of Uttara Kannada. Small reptiles, big mammals like elephants and gaur will lose their habitat and elephant corridors will be permanently destroyed. Is the MoEF here to protect the forests or just

इंडियन एक्सप्रेस / बेलगाम
INDIAN EXPRESS/BELGAUM
12 JUL 2017

विजय कर्नाटक/हुबली
VIJAYA KARNATAKA/HUBLI.
12 JUL 2017

# ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗಕ್ಕೆ ಹಸಿರು ನಿಶಾನೆ

» ಮೊದಲ ಪುಟದಿಂದ

ಈ ಹಿಂದಿನ ಸಭೆಗಳಲ್ಲಿ ಉನ್ನತಾಧಿಕಾರ ಸಮಿತಿಯೇ ಈ ಯೋಜನೆಯ ಔಚಿತ್ಯವನ್ನು ಪ್ರಶ್ನಿಸಿತ್ತು. ಇದರಿಂದ ಪಶ್ಚಿಮಘಟ್ಟದ ಸೂಕ್ಷ್ಮ ಜೀವ ಪರಿಸರ ವ್ಯವಸ್ಥೆಯೇ ಏರುಪೇರಾಗುವುದಾಗಿ ಹೇಳಿತ್ತು. ಈ ಆತಂಕಕ್ಕೆ ಹಲವು ಅಧ್ಯಯನದ ಸಮರ್ಥನೆಯಿತ್ತು. ಅಂಕೋಲ, ಯಲ್ಲಾಪುರ ಮತ್ತು ಧಾರವಾಡ ವಿಭಾಗದಲ್ಲಿ 2,02,500 ಮರಗಳನ್ನು ಕಟಾವು ಮಾಡಬೇಕಾಗುತ್ತದೆ. ಈ ಪೈಕಿ ಅಂಕೋಲ ಮತ್ತು ಯಲ್ಲಾಪುರದ ಅರಣ್ಯ ಅತ್ಯಂತ ಸೂಕ್ಷ್ಮದ್ದಾಗಿದೆ ಎಂದು ಮೇ 5 ರಂದು ನಡೆಸಿದ ಸಮಿತಿಯ 18ನೇ ಸಭೆಯಲ್ಲಿ ಚರ್ಚಿಸಲಾಗಿತ್ತು. ಆದರೆ, 19ನೇ ಸಭೆಯಲ್ಲಿ ಪಾರಿಸಾರಿಕ ಪರಿಣಾಮಕ್ಕೆ ಸಂಬಂಧಿಸಿದ ಈ ಅಂಶಗಳೆಲ್ಲವೂ ಮೂಲೆಗೆ ಸರಿದಿವೆ. ಕಾಡು ನಾಶ, ಅಪರೂಪದ ಮೃಗ, ಪಕ್ಷಿಗಳ ಸಂತತಿಯನ್ನು ವಿನಾಶದತ್ತ ನೂಕುವ ಸಾಧ್ಯಾಸಾಧ್ಯತೆ ಬಗ್ಗೆ ಪ್ರಸ್ತಾಪಿಸುತ್ತಲೇ ಯೋಜನೆಗೆ ನಿರಾಕ್ಷೇಪಣಾ ಪತ್ರ ನೀಡಲು ವೇದಿಕೆ ಸಜ್ಜು ಮಾಡಿಕೊಳ್ಳಲಾಗಿದೆ.

**ಕೈಗಾರಿಕಾಭಿವೃದ್ಧಿ:** ಲಕ್ಷಾಂತರ ಮರಗಳ ಬುಡ ಕಡಿದುರುಳಿಸಿದರೂ ಹುಬ್ಬಳ್ಳಿ-ಅಂಕೋಲ ರೈಲು ಮಾರ್ಗದಿಂದ ಕೈಗಾರಿಕೆ ಅಭಿವೃದ್ಧಿಯಾಗಲಿದೆ. ಪ್ರಮುಖವಾಗಿ ಪ್ರಗತಿಯಿಂದ ಹಿಂದುಳಿದಿರುವ ಉತ್ತರ ಕರ್ನಾಟಕದ ಚಿತ್ರಣವೇ ಬದಲಾಗಲಿದೆ. ಉತ್ತರ ಭಾರತ, ಈಶಾನ್ಯ ಭಾರತ, ಮಧ್ಯ ಭಾರತದೊಂದಿಗೆ ಇದು ಸಂಪರ್ಕ ಸೇತುವಾಗಲಿದೆ. ಜತೆಗೆ ಪೂರ್ವ ಮತ್ತು ಪಶ್ಚಿಮ ಕರಾವಳಿಯನ್ನೂ ಬೆಸೆಯಲಿದೆ. ಎನ್‌ಎಚ್-63, ಎನ್‌ಎಚ್-66 ಹೆದ್ದಾರಿಗಳ ಒತ್ತಡ ತಗ್ಗಿಸಲಿದೆ. ಅದಿರು, ಟಿಂಬರ್ ಸಾಗಿಸಲು ಅನುಕೂಲವಾಗಲಿದೆ. ಈ ಎಲ್ಲ ಆಯಾಮದಿಂದ ನೋಡಿದಾಗ ಯೋಜನೆ ಅನುಷ್ಠಾನ ಸೂಕ್ತ ಎಂಬ ನಿಲುವಿಗೆ ಬರಲಾಗಿದೆ.

**ಮಾರಕ ಪರಿಣಾಮವೇನು?:** ಯೋಜನೆ ಜಾರಿಯಿಂದಾಗುವ ದುಷ್ಪರಿಣಾಮದ ಬಗ್ಗೆಯೂ ಕಳೆದ ಸಭೆಯ ನಡಾವಳಿಯಲ್ಲಿ ಪಟ್ಟಿ ಮಾಡಲಾಗಿದೆ. ಅದರಂತೆ ಜನವಸತಿ ಪ್ರದೇಶ ಸ್ಥಳಾಂತರ ಅನಿವಾರ್ಯವಾಗಲಿದೆ. ಮರಮುಟ್ಟುಗಳ ಕಳ್ಳಸಾಗಣೆಯಾಗಬಹುದು. ಮುಂಬರುವ ದಿನಗಳಲ್ಲಿ ಗುಡ್ಡ ಕುಸಿತ, ಭೂಕಂಪದ ಅಪಾಯವೂ ಹೆಚ್ಚಾಗಬಹುದು.

### ಎಲ್ಲೆಲ್ಲಿ ಎಷ್ಟೆಷ್ಟು ಅರಣ್ಯ?

| | |
|---|---|
| ಯಲ್ಲಾಪುರ ವಿಭಾಗ | 304.06 ಹೆಕ್ಟೇರ್ |
| ಕಾರವಾರ ವಿಭಾಗ | 249.58 ಹೆಕ್ಟೇರ್ |
| ಧಾರವಾಡ ವಿಭಾಗ | 42.00 ಹೆಕ್ಟೇರ್ |
| ಒಟ್ಟು | 595.64 ಹೆಕ್ಟೇರ್ |

### ಎಲ್ಲೆಲ್ಲಿ ಎಷ್ಟು ಮರ ನಾಶ?

| | |
|---|---|
| ಯಲ್ಲಾಪುರ ವಿಭಾಗ | 1,19,439 |
| ಕಾರವಾರ ವಿಭಾಗ | 71,266 |
| ಧಾರವಾಡ ವಿಭಾಗ | 11,795 |
| ಒಟ್ಟು | 2,02,500 |

> ಪರಿಸರದ ದೃಷ್ಟಿಯಿಂದ ಉತ್ತರ ಕನ್ನಡದ ಕಾಡು ಬಹಳ ಮುಖ್ಯ. ಪಶ್ಚಿಮಘಟ್ಟದ ಪೈಕಿ ರಾಜ್ಯದಲ್ಲಿ ಅತಿ ಹೆಚ್ಚು ಅರಣ್ಯ ಇದೇ ಜಿಲ್ಲೆಯಲ್ಲಿದೆ. ಕಾಡು ನಾಶದಿಂದ ಈಗಾಗಲೇ ಮಳೆ ಕಡಿಮೆಯಾಗಿದೆ. ಇಂಥ ಪರಿಸ್ಥಿತಿಯಲ್ಲಿ ಲಕ್ಷಾಂತರ ಮರ ಕಡಿದು ಅಭಿವೃದ್ಧಿ ಕೈಗೊಳ್ಳುವುದು ಸರಿಕಾಣದು.
>
> **- ಸುರೇಶ್ ಹೆಬ್ಳೀಕರ್**, ಪರಿಸರವಾದಿ

## ಹುಬ್ಬಳ್ಳಿ-ಅಂಕೋಲ ಯೋಜನೆ

- 1998ರಲ್ಲಿ ಯೋಜನೆ ನಕ್ಷೆ ಸಿದ್ಧತೆ
- ಯೋಜನೆಗೆ 965 ಹೆಕ್ಟೇರ್ ಬಯಸಿ 2003 ರಲ್ಲಿ ಕೇಂದ್ರಕ್ಕೆ
- ಪ್ರಸ್ತಾವನೆ.
- ಬಳ್ಳಾರಿಯಿಂದ ತದಡಿ, ಬೇಲೇಕೇರಿ ಸೇರಿ ಬಂದರು ಸಂಪರ್ಕ ಯೋಜನೆ ಪ್ರಮುಖ ಉದ್ದೇಶ
- ಭಾರಿ ಅರಣ್ಯ ನಾಶದ ಕಾರಣ ಕೇಂದ್ರ ಅರಣ್ಯ ಸಲಹಾ ಸಮಿತಿಯಿಂದ ಈ ಪ್ರಸ್ತಾವ ತಿರಸ್ಕೃತ
- 2006 ರಲ್ಲಿ ಪರಿಸರ ಸಂಘಟನೆಗಳಿಂದ ಸುಪ್ರೀಂಗೆ ಅರ್ಜಿ
- ಸುಪ್ರೀಂಕೋರ್ಟ್ ನೇಮಿಸಿದ್ದ ಸಿಇಸಿಯಿಂದ ಯೋಜನೆ ಅನುಮತಿಗೆ 2015 ರಲ್ಲಿ ನಿರಾಕರಣೆ
- 2016 ರ ಫೆಬ್ರವರಿಯಲ್ಲಿ ಎನ್‌ಜಿಟಿಯಿಂದ ಹಸಿರು ನಿಶಾನೆ
- ಯೋಜನೆ ಕೈಗೆತ್ತಿಕೊಳ್ಳುವಂತೆ 2016 ರ ಅಕ್ಟೋಬರ್ 24 ರಂದು ಕೇಂದ್ರಕ್ಕೆ ರಾಜ್ಯದ ಪತ್ರ
- ಪರಿಶೀಲನೆಗೆ 2017 ರ ಏಪ್ರಿಲ್‌ನಲ್ಲಿ ಕೇಂದ್ರದಿಂದ ಸಮಿತಿ ರಚನೆ
- 2017 ರ ಏಪ್ರಿಲ್ 22 – 24 ರ ವರೆಗೆ ತಜ್ಞರಿಂದ ಯೋಜನಾ ಸ್ಥಳ ಪರಿಶೀಲನೆ

↓

Same news in the previous page

दि हिन्दु/मंगलूर
THE HINDU/MANGALORE
12 JUL 2017.

# Hubballi-Ankola railway project clears first environmental hurdle

## The line, announced 20 years ago, cuts through dense forests of the Western Ghats

MOHIT M. RAO
BENGALURU

The much-delayed, controversial project to provide a railway line – connecting Hubballi in the plains and Ankola on the coast – that cuts through the dense forests of the Western Ghats has taken its first step towards fruition. The environmental cost, however, remains high: More than 1.73 lakh trees in 1,472 acres of forests will make way for the railway project, apart from fragmentation of two tiger reserves.

On Monday, the Regional Empowered Committee of the Ministry of Environment, Forests and Climate Change (MoEF&CC) recommended the Stage-1 clearance for the long-pending project, albeit with conditions. This marks a big step for the project –which was announced in 1997 and foundation stone for which was laid in 1999 – that has seen environmental opposition and even court scrutiny.

Among the conditions mentioned, the REC has asked the Railways to propose an increased number of tunnels. According to the proposal submitted, there will be 34 tunnels and nine stations on the 168.3-km route. Similarly, the committee has asked them to revise the mitigation measures being taken, including construction of underpasses for wildlife.

### 'Project need'

It was on May 5, during the previous meeting, that the REC claimed they were "not yet convinced" about the need of the project that will cut through "pristine" forests. While environmental hurdles had persisted, the Ministry of Railways and numerous Union Ministers from Karnataka had gone on record stating that the project will proceed at all cost.

The proposal states that the line will handle nearly 27 million tonnes of cargo headed from north Karnataka towards Belekeri, (proposed) Tadri, and Karwar ports in Uttara Kannada as well as the Margao port in Goa which is being expanded to import coal. During the previous meeting, the REC had asked the Railways why the project was needed, considering that National Highway 63 (Ankola to Gooty) runs parallel to this; while, a railway line between Hubballi and Margao via Castle Rock already exists.

"The user agency (Indian Railways) has provided information on the doubts we had, including cost-benefit analysis when compared to other projects already present ... It is difficult to mitigate (environment damage) in projects like this, but there is a trade-off so that a long-pending project can come up," said Jagmohan Sharma, Additional Principal Chief Conservator of Forests (Forest Clearance).

Among the changes that saw the project get clearance is a fresh enumeration of the trees being cut. Previously, the Railways had estimated that 2.02 lakh trees would be felled on the alignment. The fresh figures lowers it to 1.73 lakh trees.




### Hubballi-Ankola railway line

Length: 168.289 km

Land acquisition: 995.6 hectares

Forest land: 595.6 hectares

34 tunnels | 9 railway stations

Trees to be cut: 1.73 lakh, down from 2.02 lakh enumerated nearly 8 years ago

Slated to carry 27 million tonnes cargo to Belekeri, Tadri, Karwar, and Margao ports

Cuts through Bedti Conservation Reserve, Anshi Dandeli Hornbill Conservation Reserve, elephant corridors, and buffer zone of Kali Tiger Reserve

### Timeline

**1951**: Formal representation reaches Union government and the Railways for a rail link between coastal Karnataka and Hubballi

**1997**: Ministry of Railways announces new broad-gauge line between Hubballi and Ankola

**1999**: Prime Minister Atal Bihari Vajpayee lays foundation stone for the project; says it will be complete in four years

**2001**: Work starts on 45-km stretch between Hubballi and Kalghatagi

**2004**: Ministry of Environment and Forests rejects a proposal to divert 965 hectares for the project

**2006**: Two environmental organisations go to the Supreme Court's Central Empowered Committee (CEC) against the project

**2015**: The CEC report to the apex court states adverse impact of project outweighs benefits and recommends rejection of proposal. Case transferred to the National Green Tribunal

**2016**: NGT clears way for the Railways to submit fresh proposals for the project

**2017**: After seeking clarifications on the need of the project, the Regional Empowered Committee of the MoEF recommends Stage I approval

## 'Another intrusion into delicate ecosystems'

STAFF REPORTER
BENGALURU

For environmentalists, the Hubballi-Ankola railway line signifies another infrastructure intrusion into delicate ecosystems when there were less-destructive alternatives present.

"There is no need for a fresh project when existing railway lines can be optimally utilised. The existing railway line through Castle Rock passes just around 80 km north of this line," said Praveen Bhargav, managing trustee of Wildlife First.

K. Ullas Karanth, director for Science-Asia, Wildlife Conservation Society, said, "There are too many of these linear intrusions in the Western Ghats already, with more ideas along the way. I completely oppose these incremental intrusions of having more highways and railway lines passing all along the length."

प्रजा वाणी/हुबली
PRAJA VANI/HUBLI,
12 JUL 2017

## ಹುಬ್ಬಳ್ಳಿ– ಅಂಕೋಲಾ ರೈಲು ಮಾರ್ಗ

# ಷರತ್ತುಬದ್ಧ ಅನುಮತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸೂಕ್ಷ್ಮ ಪರಿಸರ ವ್ಯವಸ್ಥೆಯ ಪಶ್ಚಿಮಘಟ್ಟ ಸಾಲಿನ ನಡುವೆ ಹಾದುಹೋಗಲಿರುವ ಹುಬ್ಬಳ್ಳಿ - ಅಂಕೋಲಾ ರೈಲು ಮಾರ್ಗಕ್ಕೆ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಯ ಪ್ರಾದೇಶಿಕ ಉನ್ನತಾಧಿಕಾರ ಸಮಿತಿ (ಆರ್‌ಇಸಿ) ಷರತ್ತುಬದ್ಧ ಅನುಮತಿ ನೀಡಿದೆ.

ಸೋಮವಾರ ಇಲ್ಲಿ ನಡೆದ 19ನೇ ಸಭೆಯಲ್ಲಿ ಆರ್‌ಇಸಿಯು ಐದು ಷರತ್ತುಗಳನ್ನು ವಿಧಿಸಿ ಯೋಜನೆಗೆ ಮೊದಲ ಹಂತದ ಅನುಮತಿ ನೀಡಿದೆ.

ಉತ್ತರ ಕರ್ನಾಟಕದ ಜಿಲ್ಲೆಗಳಿಂದ ರಾಜ್ಯದ ಪ್ರಮುಖ ಬಂದರುಗಳಿಗೆ ರೈಲು ಸಂಪರ್ಕ ಕಲ್ಪಿಸುವ ಉದ್ದೇಶ ಹೊಂದಿರುವ ಈ ಯೋಜನೆಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) 2016ರ ಫೆಬ್ರುವರಿ 10ರಂದು ಹಸಿರು ನಿಶಾನೆ ತೋರಿತ್ತು. ‘1980ರ ಅರಣ್ಯ (ಸಂರಕ್ಷಣೆ) ಕಾಯ್ದೆಯ ಸೆಕ್ಷನ್ 2ರ ಪ್ರಕಾರ, ರಾಜ್ಯ ಸರ್ಕಾರ ಭೂಪರಿವರ್ತನೆಗೆ ಆದೇಶ ಹೊರಡಿಸಬಹುದು. ಆದರೆ, ಅದಕ್ಕೆ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಯ ಅನುಮತಿ ಪಡೆದುಕೊಳ್ಳಬೇಕು’ ಎಂದು ಎನ್‌ಜಿಟಿ ಹೇಳಿತ್ತು.

7ನೇ ಪುಟ ನೋಡಿ

# ರೈಲು ಮಾರ್ಗಕ್ಕೆ ಷರತ್ತುಬದ್ಧ ಅನುಮತಿ

ಒಂದನೇ ಪುಟದಿಂದ..

ಕಾರವಾರ, ಯಲ್ಲಾಪುರ ಹಾಗೂ ಧಾರವಾಡ ವಿಭಾಗಗಳಲ್ಲಿ ಒಟ್ಟು 595.64 ಹೆಕ್ಟೇರ್ ಅರಣ್ಯ ಭೂಮಿಯನ್ನು ರೈಲ್ವೆ ಹಳಿ ನಿರ್ಮಾಣಕ್ಕೆ ಬಳಸಲು ಅವಕಾಶ ನೀಡುವಂತೆ ಕೋರಿ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಗೆ ರಾಜ್ಯ ಸರ್ಕಾರ 2016ರ ಅಕ್ಟೋಬರ್ 24ರಂದು ಪ್ರಸ್ತಾವ ಸಲ್ಲಿಸಿತ್ತು. 2017ರ ಏಪ್ರಿಲ್ 19ರಂದು ಆರ್‌ಇಸಿ ಪ್ರಾದೇಶಿಕ ಕಚೇರಿಯು ಸ್ಥಳ ಪರಿಶೀಲನೆಗಾಗಿ ತಜ್ಞರ ಸಮಿತಿಯನ್ನು ರಚಿಸಿತ್ತು.

‘ಈ ಯೋಜನೆಯಿಂದ ಇಡೀ ಪರಿಸರ ವ್ಯವಸ್ಥೆಗೆ ಭಾರಿ ಧಕ್ಕೆ ಉಂಟಾಗಲಿದೆ. ವನ್ಯಜೀವಿಗಳಿಗೂ ಅಪಾಯವಿದೆ’ ಎಂದು ಅಭಿಪ್ರಾಯಪಟ್ಟಿದ್ದ ಸಮಿತಿ, ಸರ್ಕಾರದಿಂದ ಕೆಲವು ಸ್ಪಷ್ಟೀಕರಣಗಳನ್ನು ಕೇಳಿತ್ತು.

‘ಈ ರೈಲು ಮಾರ್ಗ ನಿರ್ಮಿಸಲು ಅರಣ್ಯವೇ ಹೆಚ್ಚಾಗಿರುವ ಸ್ಥಳವನ್ನು ಆಯ್ಕೆ ಮಾಡಿಕೊಂಡ ಉದ್ದೇಶವನ್ನು ಸ್ಪಷ್ಟಪಡಿಸಬೇಕು. ಯೋಜನೆಯ ವೆಚ್ಚ ಹಾಗೂ ಅದರಿಂದಾಗುವ ಪ್ರಯೋಜನಗಳ ಕುರಿತ ವಿಸ್ತೃತ ವಿಶ್ಲೇಷಣೆ ನಡೆಸಬೇಕು. ಪರ್ಯಾಯ ಮಾರ್ಗಗಳನ್ನು ನಿರ್ಮಿಸುವ ಸಾಧ್ಯತೆ ಹಾಗೂ ಅವುಗಳಿಗೆ ತಗಲುವ ವೆಚ್ಚ, ಪರ್ಯಾಯ ಸಾರಿಗೆ ಬಳಸುವ ಸಾಧ್ಯತೆಗಳನ್ನು ತುಲನೆ ಮಾಡಬೇಕು’ ಎಂದೂ ಸಮಿತಿ ಹೇಳಿತ್ತು.

ಈ ಯೋಜನೆಯ ತಾಂತ್ರಿಕ, ಆರ್ಥಿಕ ಹಾಗೂ ಪರಿಸರ ಸಂಬಂಧಿಸಿದ ಮಾಹಿತಿಗಳೊಂದಿಗೆ ರಾಜ್ಯ ಸರ್ಕಾರವು ಸಮಿತಿಗೆ ವಿವರಣೆ ನೀಡಿತ್ತು. ಪರಿಸರದ ಮೇಲಿನ ಪರಿಣಾಮ ಅಧ್ಯಯನ ವರದಿಯನ್ನೂ ಸರ್ಕಾರ ಸಲ್ಲಿಸಿತ್ತು.

**ಆರ್‌ಇಸಿ ವಿಧಿಸಿರುವ ಷರತ್ತುಗಳು**

- ಈ ಮಾರ್ಗದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸುರಂಗಗಳ ಸಂಖ್ಯೆಯನ್ನು ಹಾಗೂ ವಯಡಕ್ಟ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು. (ಈಗಿನ ಯೋಜನೆ ಪ್ರಕಾರ ರೈಲ್ವೆ ಇಲಾಖೆ ಈ ಮಾರ್ಗದಲ್ಲಿ ಒಟ್ಟು 34 ಸುರಂಗಗಳನ್ನು ನಿರ್ಮಿಸಲು ಉದ್ದೇಶಿಸಿದೆ)
- ಅರಣ್ಯದ ಮೇಲೆ ಉಂಟಾಗುವ ದುಷ್ಪರಿಣಾಮವನ್ನು ಕಡಿಮೆ ಮಾಡುವ ಸಲುವಾಗಿ ರೂಪಿಸಿರುವ ಯೋಜನೆಯಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಬೇಕು. ಅರಣ್ಯ ಇಲಾಖೆ ಜೊತೆ ಸಮಾಲೋಚನೆ ನಡೆಸಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಅಂಡರ್‌ಪಾಸ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು.
- ಬೇಡ್ತಿ ಸಂರಕ್ಷಣಾ ಮೀಸಲು, ಮಳೆಹಕ್ಕಿ (ಹಾರ್ನ್‌ಬಿಲ್) ಸಂರಕ್ಷಣಾ ಮೀಸಲು, ಅಣಶಿ ಮತ್ತು ದಾಂಡೇಲಿ ಹುಲಿ ಸಂರಕ್ಷಿತ ಪ್ರದೇಶಗಳ ಮೀಸಲು ವಲಯಗಳು ಆನೆ ಕಾರಿಡಾರ್‌ಗಳ ಮೀಸಲು ಪ್ರದೇಶಗಳು ಒಂದಕ್ಕೊಂದು ಸೇರಿಕೊಳ್ಳುವ ಜಾಗಗಳ ಮೂಲಕ ರೈಲು ಮಾರ್ಗ ಹಾದುಹೋಗಲಿದೆ. ಇಲ್ಲಿನ ವನ್ಯಜೀವಿಗಳ ಮೇಲೆ ಪರಿಣಾಮ ಉಂಟಾಗುವುದನ್ನು ತಡೆಯುವ ಬಗ್ಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿಸಮಿತಿಗೆ ಪ್ರಸ್ತಾವ ಸಲ್ಲಿಸಬೇಕು.
- ಈ ಯೋಜನೆಗೆ ಕಡಿಯಬೇಕಾಗುವ ಮರಗಳ ಪಟ್ಟಿ ಯನ್ನು ಅರಣ್ಯ ಇಲಾಖೆ ಸಿದ್ಧಪಡಿಸುವಾಗ, ಅವುಗಳ ಪ್ರಭೇದ, ಸುತ್ತಳತೆಗಳ ವಿವರಗಳನ್ನು ನಮೂದಿಸಬೇಕು.
- ಕಾಡು ಬೆಳೆಸುವುದಕ್ಕೆ ಮಾನವ ಚಟುವಟಿಕೆಯಿಂದ ಮೂಲಸ್ವರೂಪ ಕಳೆದುಕೊಂಡ ಪ್ರದೇಶವನ್ನು ಬಳಸಲಾಗುತ್ತದೆಯೇ ಅಥವಾ ಕುದುರೆಮುಖ ಯೋಜನೆಯವರು ಹಿಂತಿರುಗಿಸಿರುವ ಕಂದಾಯ ಭೂಮಿಯನ್ನು ಬಳಸಿಕೊಳ್ಳಲಾಗುತ್ತದೆಯೇ ಎಂಬುದನ್ನು ಸ್ಪಷ್ಟಪಡಿಸಿಕೊಂಡು ವಿಸ್ತೃತ ಯೋಜನೆ ರೂಪಿಸಬೇಕು.

Same news in the privious page

दक्षिण भारत राष्ट्मत/बेंगलूर.
DAKSHIN BHARAT RASHTRA MATH/SBC
12 JUL 2017






# मानव तस्करी के संदेह में रेलवे स्टेशन पर रोके गए सैंकड़ों बच्चे

**बेंगलूरु।** मानव तस्करी का संदेह व्यक्त कर एक रेलयात्री द्वारा पुलिस को दी गई सूचना के बाद मंगलवार को बेंगलूरु केंटोनमेंट रेलवे पुलिस ने गुवाहाटी से बेंगलूरु आ रही ट्रेन से करीब 200 नाबालिग बच्चों और उनके साथ सफर कर रहे 16 प्रशिक्षकों को रेलवे स्टेशन पर घंटों रोके रखा। सैंकड़ों बच्चों को एक साथ बिना अभिभावकों के लाने का मामला मानव तस्करी का है या नहीं इसकी पुख्ता जानकारी जुटाने के लिए पुलिस ने बाल कल्याण समिति के साथ छानबीन शुरु की। ट्रेन से लाए जा रहे सभी बच्चे 8 से 13 वर्ष की आयु के थे। इस दौरान बाल कल्याण समिति के सदस्यों ने बच्चों से जानकारी जुटाई की क्या वे किसी दबाव में बेंगलूरु आए हैं या फिर नियमित रूप से पढाई लिखाई या घूमने के लिए सिलसिले में वे आए हैं? सुबह करीब 11 बजे बच्चों को ट्रेन से उतारा गया और उन्हें केंट रेलवे स्टेशन के वेटिंग हॉल में रखा गया। इस दौरान दोपहर में सभी बच्चों को पुलिस की ओर से भोजन उपलब्ध कराया गया। हालांकि इस दौरान बड़ी संख्या में स्थानीय लोग भी वहां जुट गए और बच्चों के आगमन को मानव तस्करी से संबंधित न होने का दावा किया। शुरुआती जानकारी में ऐसी खबरें आईं कि बच्चे पश्चिम बंगाल, बिहार और असम के हैं और उन्हें गुवाहाटी एक्सप्रेस से बेंगलूरु लाया गया है जिन्हें बाद में टमकरु, शिवमोग्गा बेंगलूरु आदि स्थित अपने अपने मदरसों में भेजा जाएगा। ये बच्चे रमजान की छुट्टियों में अपने पैतृक स्थल गए थे।

हालांकि मामले के संदेहास्पद होने की वजह से कई घंटों तक बच्चों को रेलवे स्टेशन पर ही रोक कर रखा गया। पुलिस को यात्रियों की ओर से संदेह के आधार पर शुरुआत में जो सूचना दी गई थी उसमें बच्चों को मानव तस्करी कर लाने की बात कही गई थी। कैंट रेलवे स्टेशन पर सैंकड़ों की संख्या में एकत्रित हुए स्थानीय लोग देर शाम तक जुटे रहे और उनका दावा था कि बच्चों को मानव तस्करी के लिए नहीं बल्कि मदरसों में पढने के लिए लाया गया है जो पूरी तरह से वैध है। इस दौरान विधायक जमीर अहमद एवं एमएलसी रिजवान अरसद भी केंट रेलवे स्टेशन पहुंचे और उन्होंने वरीय पुलिस अधिकारियों से बातचीत की। तहकीकात उपरांत बच्चों को बसों से उनके गंतव्य स्थलों पर भेजा गया।

विजयवाणी / हुबली
Vijay Vani/ Hubli
12 JUL 2017

### ಗುವಾಹಟಿ ರೈಲಿನಲ್ಲಿ ಬಂದಿಳಿದ 208 ಮಕ್ಕಳು

# ರೈಲ್ವೆ ನಿಲ್ದಾಣದಲ್ಲಿ ಆತಂಕ ಸೃಷ್ಟಿಸಿದ ಮಕ್ಕಳ ಸೇನೆ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಮಂಗಳವಾರ ಬೆಳಗ್ಗೆ ಗುವಾಹಟಿ ಎಕ್ಸ್‌ಪ್ರೆಸ್ ರೈಲು ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣಕ್ಕೆ ಆಗಮಿಸಿದಾಗ ನೂರಾರು ಮಕ್ಕಳ ಸೈನ್ಯವೇ ಇಳಿದಿದ್ದು ಇನ್ನಿಲ್ಲದ ಕುತೂಹಲ ಹಾಗೂ ಭಾರೀ ಆತಂಕದ ವಾತಾವರಣ ಸೃಷ್ಟಿಸಿತು. ಈ ಮಕ್ಕಳೆಲ್ಲರೂ ಬಾಂಗ್ಲಾದೇಶದಿಂದ ಅಕ್ರಮವಾಗಿ ಬಂದ ವಲಸಿಗರು. ಮಾನವ ಕಳ್ಳಸಾಗಣೆ ಮೂಲಕ ಇಲ್ಲಿಗೆ ಕರೆತರಲಾಗಿದೆ ಎಂಬ ವದಂತಿ ಇನ್ನಷ್ಟು ಗೊಂದಲಗಳಿಗೆ ಕಾರಣವಾಯಿತು.

ಗುವಾಹಟಿ-ಬೆಂಗಳೂರು ಎಕ್ಸ್‌ಪ್ರೆಸ್ ರೈಲಿನಲ್ಲಿ ಆಗಮಿಸಿದ್ದ 208 ಮಕ್ಕಳು ಕಂಟೋನ್ಮೆಂಟ್ ಹಾಗೂ ಕೆ.ಆರ್.ಪುರ ರೈಲು ನಿಲ್ದಾಣಗಳಲ್ಲಿ ಇಳಿದುಕೊಂಡರು. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಎಲ್ಲ ಮಕ್ಕಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ದೇಶದ ಬೇರೆಬೇರೆ ರಾಜ್ಯಗಳಿಂದ ಮದರಸಾಗಳಲ್ಲಿ ಶಿಕ್ಷಣ ಪಡೆಯಲು ಇಲ್ಲಿಗೆ ಬಂದಿರುವ ವಿಷಯ ಗೊತ್ತಾಗಿದೆ. ▶ ಪುಟ 4


ವಿಜಯವಾಣಿ ಚಿತ್ರ

ಬೆಂಗಳೂರಿನ ರೈಲ್ವೆ ನಿಲ್ದಾಣಕ್ಕೆ ಬಂದ ಮಕ್ಕಳು.

## ನಾಲ್ಕು ಬಸ್‌ಗಳಲ್ಲಿ ರವಾನೆ

ಮಕ್ಕಳನ್ನು ಪೊಲೀಸರು ವಶಕ್ಕೆ ಪಡೆದಿರುವ ಮಾಹಿತಿ ಎಲ್ಲೆಡೆ ಹರಡುತ್ತಿದಂತೆ ವಿವಿಧ ಸರ್ಕಾರೇತರ ಸಂಘ-ಸಂಸ್ಥೆಗಳು ನಿಲ್ದಾಣಕ್ಕೆ ಬಂದು ಆಕ್ಷೇಪ ವ್ಯಕ್ತಪಡಿಸಿದರು. ಇವರು ಬೆಂಗಳೂರು, ತುಮಕೂರಿನ ಅಮಲಾಪುರದ ಮದರಸಾದ ವಿದ್ಯಾರ್ಥಿಗಳು. ರಂಜಾನ್ ಮುಗಿಸಿ ನಗರಕ್ಕೆ ವಾಪಸಾಗಿದ್ದಾರೆ. ಅವರನ್ನು ಬಿಡಬೇಕೆಂದು ಆಗ್ರಹಿಸಿದರು. ಮಧ್ಯಾಹ್ನದ ವೇಳೆ ಜನಪ್ರತಿನಿಧಿಗಳು ರೈಲು ನಿಲ್ದಾಣಕ್ಕೆ ಬಂದು ಪೊಲೀಸರ ಜತೆ ಚರ್ಚೆ ನಡೆಸಿ ಎಲ್ಲ ಮಕ್ಕಳನ್ನು ಮೌಲ್ವಿಗಳ ಜತೆ ಕಳುಹಿಸುವಂತೆ ಸೂಚಿಸಿದರು. 4 ಬಸ್‌ಗಳನ್ನು ಮಾಡಿ ಆಯಾ ಜಿಲ್ಲೆಗಳಿಗೆ ಮೇಲ್ವಿಚಾರಕರೊಂದಿಗೆ ರವಾನಿಸಿದರು. ಈ ಸಂಬಂಧ ಪ್ರಕರಣ ದಾಖಲಾಗಿಲ್ಲ.

# ರೈಲ್ವೆ ನಿಲ್ದಾಣದಲ್ಲಿ ಆತಂಕ ಸೃಷ್ಟಿಸಿದ ಮಕ್ಕಳ ಸೈನ್ಯ

**ಮೊದಲ ಪುಟದಿಂದ...**

ಬಿಹಾರ, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಿಂದ ಈ ಮಕ್ಕಳನ್ನು ಮದರಸಾದಲ್ಲಿ ಶಿಕ್ಷಣ ಕೊಡಿಸಲು 17 ಮೇಲ್ವಿಚಾರಕರು ಕರೆತಂದಿದ್ದರು. ಕೇಂದ್ರ ಹಾಗೂ ರಾಜ್ಯ ರೈಲ್ವೆ ಪೊಲೀಸರು ನಿಲ್ದಾಣದಲ್ಲೇ ಪ್ರತಿಯೊಬ್ಬ ಬಾಲಕನ ಗುರುತಿನ ಚೀಟಿ ಮತ್ತು ವಿಳಾಸ ಪರಿಶೀಲನೆಗೆ ಒಳಪಡಿಸಿದರು. ಮಕ್ಕಳ ಕಲ್ಯಾಣ ಸಮಿತಿ, ಸಿಸಿಬಿ, ಸ್ಥಳೀಯ ಪೊಲೀಸರು ಸಹ ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡರು.

ಈ ವೇಳೆ ಕೆಲವು ಮುಸ್ಲಿಂ ಸಂಘಟನೆ ಕಾರ್ಯಕರ್ತರು ನಿಲ್ದಾಣದ ಬಳಿ ಜಮಾಯಿಸಿ ಪ್ರತಿಭಟನೆ ನಡೆಸಿದರು. ಶಾಸಕರಾದ ಜಮೀರ್ ಅಹಮದ್, ಅಖಂಡ ಶ್ರೀನಿವಾಸ ಮೂರ್ತಿ, ಎಂಎಲ್‌ಸಿ ರಿಜ್ವಾನ್ ಅರ್ಷದ್ ಸ್ಥಳಕ್ಕೆ ಭೇಟಿ ಕೊಟ್ಟು ಬಾಲಕರನ್ನು ಮೌಲ್ವಿಗಳ ವಶಕ್ಕೆ ಒಪ್ಪಿಸಬೇಕು ಎಂದು ಒತ್ತಾಯಿಸಿದರು. ಪ್ರತಿಯಾಗಿ ಆಕ್ಷೇಪ ವ್ಯಕ್ತಪಡಿಸಿದ ಎಬಿವಿಪಿ, ಹಿಂದುಪರ ಸಂಘಟನೆ ಕಾರ್ಯಕರ್ತರು ಬಾಲಕರ ಪೂರ್ವಾಪರ ಪರಿಶೀಲನೆ ನಡೆಸುವಂತೆ ಆಗ್ರಹಿಸಿದರು. ಬೆಳಗ್ಗೆ 11.30ರಿಂದ ರಾತ್ರಿವರೆಗೂ ರೈಲು ನಿಲ್ದಾಣದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

## ಎಸ್‌ಪಿ ಹೇಳಿದ್ದೇನು?

ಒಟ್ಟು 208 ಮಕ್ಕಳನ್ನು ವಶಕ್ಕೆ ಪಡೆದು ದಾಖಲೆ ಪರಿಶೀಲನೆ ಮಾಡಲಾಗಿದೆ. ಕೊನೆಗೆ ಮೇಲ್ವಿಚಾರಕರ ಜತೆಗೆ ಎಲ್ಲರನ್ನೂ ಬಿಟ್ಟು ಕಳುಹಿಸಿದ್ದೇವೆ ಎಂದು ರೈಲ್ವೇ ಎಸ್‌ಪಿ ಚೈತ್ರಾ ಅವರು ಮಾಧ್ಯಮಕ್ಕೆ ಮಾಹಿತಿ ನೀಡಿದ್ದಾರೆ. ರಾಜ್ಯದ ವಿವಿಧ ಮದರಸಗಳಲ್ಲಿ ವ್ಯಾಸಂಗ ಮಾಡುತ್ತಿದ್ದ 196 ಬಾಲಕರು ರಂಜಾನ್ ಪ್ರಯುಕ್ತ ಹುಟ್ಟೂರಿಗೆ ತೆರಳಿದ್ದರು. ಇವರೊಂದಿಗೆ ಇನ್ನಷ್ಟ ಮಕ್ಕಳನ್ನು ಮೌಲ್ವಿಗಳು ಕರೆತಂದಿದ್ದಾರೆ. ಶಿವಮೊಗ್ಗ ಮದರಸಾಗೆ-82, ತುಮಕೂರಿಗೆ 57, ಮಡಿಕೇರಿ 14, ಎಲೆಕ್ಟ್ರಾನಿಕ್ ಸಿಟಿ 8, ಆರ್.ಟಿ.ನಗರ 5, ಬೊಮ್ಮನಹಳ್ಳಿ 32 ಸೇರಿ ಬೇರೆ ಬೇರೆ ಕಡೆಗೆ ಮಕ್ಕಳನ್ನು ಕಳುಹಿಸಲಾಗಿದೆ. ಕೆಲವರ ಬಳಿ ಆಧಾರ್ ಕಾರ್ಡ್ ಲಭ್ಯವಾಗಿದ್ದು, ಬಹುತೇಕರ ಬಳಿ ಯಾವುದೇ ದಾಖಲೆ ಇಲ್ಲ. ಮದರಸಾಗಳ ಮೌಲ್ವಿಗಳು ಮತ್ತು ಮೇಲ್ವಿಚಾರಕರ ಗುರುತಿನ ಚೀಟಿ, ವಿಳಾಸ ಸಂಗ್ರಹಿಸಲಾಗಿದೆ. ಈ ಎಲ್ಲ ದಾಖಲೆಗಳನ್ನು ಆಯಾ ರಾಜ್ಯದ ಪೊಲೀಸ್ ಇಲಾಖೆಗೆ ರವಾನಿಸಿ ಮತ್ತೆ ಪರಿಶೀಲನೆ ನಡೆಸಲಾಗುತ್ತದೆ. ಕಾನೂನುಬಾಹಿರ ಚಟುವಟಿಕೆ ಕಂಡುಬಂದರೆ ಕ್ರಮ ತೆಗೆದುಕೊಳ್ಳುವುದಾಗಿ ಎಸ್‌ಪಿ ಚೈತ್ರಾ ಎಚ್ಚರಿಸಿದ್ದಾರೆ.

## ಬೆಳಗ್ಗೆ ನಡೆದಿದ್ದು ಏನು ?

ಅಸ್ಸಾಂನಿಂದ ನಗರಕ್ಕೆ ಬರುತ್ತಿರುವ ರೈಲಿನಲ್ಲಿ ಮಕ್ಕಳ ಕಳ್ಳ ಸಾಗಣೆ ನಡೆಯುತ್ತಿದ್ದು, ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನು ಕರೆತರಲಾಗುತ್ತಿದೆ ಎಂದು ರೈಲಿನಲ್ಲಿ ಪ್ರಯಾಣಿಸುತ್ತಿದ್ದವರೊಬ್ಬರು ಸೋಮವಾರವೇ ಬೆಂಗಳೂರಿನ ಸ್ನೇಹಿತರಿಗೆ ತಿಳಿಸಿದ್ದರು. ಈ ಮಾಹಿತಿ ಆಧರಿಸಿ ರಾಜ್ಯ ಗುಪ್ತದಳ, ಸಿಸಿಬಿ ಮತ್ತು ಮಾಧ್ಯಮ ಪ್ರತಿನಿಧಿಗಳು ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ ಜಮಾಯಿಸಿದ್ದರು. ಕೆಎಸ್‌ಆರ್‌ಪಿ ತುಕಡಿ ಸಹಿತ 50ಕ್ಕೂ ಅಧಿಕ ಪೊಲೀಸರು ಕಾವಲಿಗಿದ್ದರು. 10 ರಿಂದ 17 ವರ್ಷದ ಒಳಗಿನ 208 ಬಾಲಕರು, ಮೇಲ್ವಿಚಾರಕರು ರೈಲಿನಿಂದ ಇಳಿಯುತ್ತಿದಂತೆ ಎಲ್ಲರನ್ನು ವಶಕ್ಕೆ ಪಡೆದು ವಿಶ್ರಾಂತಿ ಕೊಠಡಿಗೆ ಕೂರಿಸಲಾಗಿತ್ತು. ಕುಡಿಯುವ ನೀರು, ಊಟಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮಕ್ಕಳ ಜತೆಗೆ ಒಂದೊಂದು ಗುಂಪಿಗೆ ಒಬ್ಬರಂತೆ ಮೌಲ್ವಿಗಳು, ಶಿಕ್ಷಕರು ಕೂಡಾ ಆಗಮಿಸಿದ್ದರು.

> “ರೈಲ್ವೆ ಪೊಲೀಸರ ಕರ್ತವ್ಯಲೋಪದಿಂದ ಈ ಪ್ರಮಾದ ನಡೆದಿದೆ. ಈ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಿ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸುತ್ತೇವೆ. ಮುಸ್ಲಿಂ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರು ಮಕ್ಕಳಿಗೆ ತೊಂದರೆ ಕೊಟ್ಟಿಲ್ಲ. ಈ ವಿಚಾರದಲ್ಲಿ ವಿವಾದ ಬೇಡ.
>
> । ಎನ್.ಎ.ಹ್ಯಾರಿಸ್
>
> ಶಾಸಕ ಮತ್ತು ಅಧ್ಯಕ್ಷ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸದನ ಸಮಿತಿ

↓

Same news in the previous page

ಕನ್ನಡ ಪ್ರಭಾ / ಬೆಳಗಾವಿ
KANNADA PRABHA/BELGAUM
12 JUL 2017

# ಅಣ್ಣಿಗೇರಿ ರೈಲ್ವೆ ಬ್ರಿಡ್ಜ್ ಅಗಲೀಕರಣಕ್ಕೆ ಸೂಚನೆ

• **ಕನ್ನಡಪ್ರಭ ವಾರ್ತೆ** ಅಣ್ಣಿಗೇರಿ

ಪಟ್ಟಣದ ಹಳ್ಳಿಕೇರಿ- ಅಡ್ನೂರ ಮಾರ್ಗದ ಮಧ್ಯದಲ್ಲಿರುವ ರೈಲ್ವೆ ಬ್ರಿಡ್ಜ್ ಚಿಕ್ಕದಾಗಿದೆ. ರೈತರು ತಮ್ಮ ಕೃಷಿ ಚಟುವಟಿಕೆಗೆ ಚಕ್ಕಡಿ, ಟ್ರ್ಯಾಕ್ಟರ್‌ಇತರೆವಾಹನಗಳನ್ನುತೆಗೆದುಕೊಂಡು ಎರಡು ಕಿ.ಮೀ. ಸುತ್ತುವರೆದು ಹೊಲ, ಗ್ರಾಮಗಳಿಗೆ ತೆರಳಲು ತೊಂದರೆಯಾಗಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಕಿರಿದಾದ ಬ್ರಿಡ್ಜ್‌ನ ಅಗಲೀಕರಣ ಮಾಡಬೇಕೆಂದು ನೈರುತ್ಯ ರೈಲ್ವೆ ಇಲಾಖೆ ಮಹಾ ಪ್ರಬಂಧಕ ಗುಪ್ತಾ ಅವರಿಗೆ ಸಂಸದ ಪ್ರಹ್ಲಾದ ಜೋಶಿ ಸೂಚಿಸಿದರು.

ನೂತನ ಅಣ್ಣಿಗೇರಿ ತಾಲೂಕಿಗೆ 20ರಿಂದ 25 ಹಳ್ಳಿಯ ಜನ ನಿತ್ಯ ಸಂಚರಿಸುತ್ತಿದ್ದು, ರೈತರಿಗೆ ಮತ್ತು ಸಾರ್ವಜನಿಕರಿಗೆ, ಸಮಯ ಮತ್ತು ವಾಹನಗಳ ಇಂಧನ ವ್ಯಯದಿಂದ ತೊಂದರೆಯಾಗುತಿದೆ. ಹುಬ್ಬಳ್ಳಿಯ ರೈಲ್ವೆ ಸೌಧದಲ್ಲಿ ರೈಲ್ವೆ ಅಧಿಕಾರಿಗಳ ಮತ್ತು ಅಣ್ಣಿಗೇರಿ ರೈತರ ಸಭೆ ನಡೆಸಿ ವಿವರಿಸಿದರು.

ಅಣ್ಣಿಗೇರಿ ರೈಲ್ವೆ ಇಲಾಖೆಯಿಂದ ಉದ್ಭವಿಸಿರುವ ಅನೇಕ ಸಮಸ್ಯೆಗಳನ್ನು ರೈತ ಮುಖಂಡ ಎ.ಪಿ. ಗುರಿಕಾರ, ಶಿವಶಂಕರ ಕಲ್ಲೂರ ಸಭೆ ಗಮನಕ್ಕೆ ತಂದರು. ಈ ಹಿಂದೆ ಹಳ್ಳಿಕೇರಿ-ಅಡ್ನೂರ ಮಾರ್ಗ ಮಧ್ಯ ಬರುವ ರೈಲ್ವೆ ಬ್ರಿಡ್ಜ್ ಮೀಟರ್ ಗೇಜ್ ಇದ್ದಾಗ, ಬಸ್-ಲಾರಿ ಮುಂತಾದ ವಾಹನಗಳು ಸರಾಗವಾಗಿ ಹಾದು ಹೋಗುತ್ತಿದ್ದವು. ಮೀಟರ್ ಗೇಜ್ ಲೈನ್‌ನ್ನು ಬ್ರಾಡ್‌ಗೇಜ್ ಲೈನ್‌ಗೆ ಪರಿವರ್ತಿಸಿದಾಗ ರೈತರ, ಸಾರ್ವಜನಿಕರ, ಗಮನಕ್ಕೆ ತಾರದೆ, ರೈಲ್ವೆ ಇಲಾಖೆ ಏಕಪಕ್ಷೀಯ ನಿರ್ಣಯ ತೆಗೆದುಕೊಂಡು ವಿಶಾಲವಾದ ಬ್ರಿಡ್ಜ್‌ನ್ನು ಕಿರಿದು ಮಾಡಿ 1 ಕಿ.ಮೀ ಅಂತರದಲ್ಲಿ ರೈಲ್ವೆ ಗೇಟ್ ಅಳವಡಿಸಿದ್ದಾರೆ. ರಸ್ತೆ ಮತ್ತು ಬ್ರಿಡ್ಜ್‌ಗೆ ಸಂಬಂಧಿಸಿದ ನಕಾಶೆ ತೋರಿಸಿ, ಬ್ರಿಡ್ಜ್ ಅಗಲೀಕರಣದ ಅವಶ್ಯಕತೆ ಇದೆ. ಹೆಟ್ಟದ ದಾರಿ ಸಂಪೂರ್ಣ ಬಂದ್ ಆಗಿದ್ದು, ರೈಲ್ವೆ ಇಲಾಖೆಯ ಹೊಸ ಲೈನ್ ಜೋಡಣೆಗಾಗಿ ರಸ್ತೆಯ ಮೇಲೆ ಮಣ್ಣು ಹಾಕಿ ಸಂಚಾರ ಬಂದ್ ಮಾಡಿದ್ದಾರೆ. ಇದರಿಂದ ಹೆಟ್ಟದ ಮಾರ್ಗದಲ್ಲಿ ಸಂಚರಿಸುವ ರೈತರು, ಸಾರ್ವಜನಿಕರಿಗೆ ತುಂಬಾ ತೊಂದರೆಯಾದ ಕಾರಣ ರಸ್ತೆಯನ್ನು ರೈಲ್ವೆ ಇಲಾಖೆಯಿಂದ ತೆರವು ಮಾಡಿಸಿಕೊಡಬೇಕೆಂದು ಸಂಸದರಲ್ಲಿ ಮನವಿ ಮಾಡಿದರು.

ಈ ಎಲ್ಲ ಸಮಸ್ಯೆಗಳ ಕುರಿತು ಸ್ಥಳೀಯವಾಗಿ ಪರಿಶೀಲನೆಮಾಡಿಸಮಸ್ಯೆ ಪರಿಹರಿಸಬೇಕೆಂದು ಸಭೆಯಲ್ಲಿದ್ದ ರೈಲ್ವೆ ಇಲಾಖೆಯ ಅಧಿಕಾರಿಗಳಿಗೆ ಸಂಸದ ಪ್ರಹ್ಲಾದ ಜೋಶಿ ಸೂಚಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ರೈಲ್ವೆ ಅಧಿಕಾರಿಗಳು ಒಂದೆರಡು ದಿನಗಳಲ್ಲಿ ಸ್ಥಳ ಪರಿಶೀಲನೆ ಮಾಡಿ ಸಮಸ್ಯೆ ಪರಿಹರಿಸುವುದಾಗಿ ತಿಳಿಸಿದರು.

ರೈತ ಮುಖಂಡರಾದ ಎ.ಪಿ. ಗುರಿಕಾರ, ದ್ಯಾಮಣ್ಣ ಕೊಗ್ಗಿ, ದಾವಲಸಾಬ್ ದರವಾನ, ಈರಣ್ಣ ಗುರಿಕಾರ, ಈಶಣ್ಣ ಹೊಂಬಳ, ಮುತ್ತು ಜಂತ್ಲಿ, ಮಲ್ಲಪ್ಪ ಬ್ಯಾಹಟ್ಟಿ, ಹನಮಂತ ನಲವಡಿ, ರಾಮಣ್ಣ ಬೆನಕನಹಳ್ಳಿ ಇದ್ದರು.

Notice for Broadening of Annigeri Railway Bridge.

राजस्थान पत्रीका/बेंगलूर
RAJASTHAN PATRIKA/BANGALORE
12 JUL 2017

## छोटी...बड़ी खबरें



### एप से मिलेगी रेलवे की सारी जानकारी

नई दिल्ली . रेलवे एक ऐसा एप लॉन्च करने जा रहा है जिसमें रेल यात्रियों के लिए सारी जानकारी एक जगह उपलब्ध होगी। इसमें टिकट बुकिंग, खानपान, अनारक्षित टिकट, शिकायत, किराया, ट्रेनों के वास्तविक स्थिति आदि जानकारी एक जगह मिलेगी।